# ಪಾಠ – ೨ ಸೇವೆಯ ಸ್ಥಿರಗಂಭ – ಅಪೋಸ್ತಲನಾದ ಪೇತ್ರ

**ಪೀಠಿಕೆ**:– ಕಳೆದ ವಾರ ನಾವು ಪೇತ್ರನ ಪ್ರಾರಂಭದ ವರುಷಗಳ ಸೇವೆಯನ್ನು ಕಂಡುಕೊಂಡೆವು. ಸುವಾರ್ತೆಯ ಕೆಲಸದಲ್ಲಿ ಸ್ವ–ತ್ಯಾಗವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲಿಲ್ಲ. ಆದರೆ ಆತನ ಮುಂದೆ ನಿಜವಾದ ಸೇವೆಯ ಅರ್ಥವು ಬೇರೂರುತ್ತಿತು. ಮತ್ತು ಪರಲೋಕದಲ್ಲಿ ಆತನಿಗಾಗಿ ಭವಿಷ್ಯದ ಮಹಿಮೆ ಕಾದುಕೊಂಡಿತ್ತು. ಈ ಅನುಭವಿ ಪೇತ್ರನಿಂದ ನಾವು ಏನನ್ನು ಕಲಿಯಬಹುದು? ಯಾವ ರೀತಿಯಲ್ಲಿ ಒಬ್ಬ ಪರಿಪಕ್ವತೆಯುಳ್ಳ ಕ್ರೈಸ್ತನು ಜೀವಿಸುತ್ತಾನೆ? ಅಥವಾ ಪೇತ್ರನಿಗೆ ನಮಗಿಲ್ಲದ ವಿಶೇಷವಾದ ಯಾವ ಅಧಿಕಾರ ಕೊಡಲ್ಪಟ್ಟಿತು? ಆತನು ನಮ್ಮ ಮಾದರಿಯೇ? ಸತ್ಯವೇದದ ಮೂಲಕ ಈ ಎಲ್ಲಾ ಸತ್ಯಾಂಶಗಳನ್ನು ಕಲಿತುಕೊಳ್ಳೋಣ.

**1. ಪೋಪನಾದ ಪೇತ್ರನು**

ಅ) ಮತ್ತಾಯ 16:13–14ನ್ನು ಓದಿಕೊಳ್ಳಿ.

ಅನೇಕ ಸಂಘ ಸಂಸ್ಥೆಗಳು ದಿನ ಪತ್ರಿಕೆಗಳಲ್ಲಿ ತಮ್ಮ ಬಗ್ಗೆ ಬರೆದಿರುವ ವಾರ್ತೆಗಳನ್ನು ಕತ್ತರಿಸಿ ಸಂಗ್ರಹಿಸಿಕೊಳ್ಳುತ್ತಾರೆ. ತಮ್ಮ ಬಗ್ಗೆ ಪತ್ರಿಕೆಗಳು ಏನು ಹೇಳುತ್ತವೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಹಾಗೆ ಮಾಡುತ್ತಾರೆ. ಅದೇ ರೀತಿ ಕ್ರಿಸ್ತನು ಎಂಥಹ ಸೇವೆಯನ್ನು ತನ್ನ ಶಿಷ್ಯರಿಂದ ಅಪೇಕ್ಷಿಸುತ್ತಾನೋ? ನಮ್ಮನ್ನು ಹೇಳುವುದರಲ್ಲಿ ಕ್ರಿಸ್ತನ ಉದ್ದೇಶವೇನು? (ಸಾರ್ವಜನಿಕರು ತನ್ನ ಬಗ್ಗೆ ಏನು ಹೇಳುತ್ತಾರೆ ಎಂಬುವ ಕುತೂಹಲ ಕ್ರಿಸ್ತನಿಗಿರಬಹುದು. ಆದರೆ ನಿಜಾಂಶದಲ್ಲಿ ತನ್ನ ಶಿಷ್ಯರು ತನ್ನನ್ನು ಹೇಗೆ ನೋಡುತ್ತಾರೆ. ಎನ್ನುವ ಕುತೂಹಲ ಕ್ರಿಸ್ತನಿಗಿತ್ತು.)

ಆ) ಮತ್ತಾಯ 16:15–17ನ್ನು ಓದಿಕೊಳ್ಳಿ.

ಕಳೆದ ವಾರ ನಾವು ಪೇತ್ರನ ಸೋಲನ್ನು ಚರ್ಚಿಸಿದೆವು. ಕ್ರಿಸ್ತನ ಇಹಲೋಕದ ಪಾತ್ರವನ್ನು ಪೇತ್ರನು ಹೇಗೆ ಅಪಾರ್ಥ ಮಾಡಿಕೊಂಡನು ಎಂಬುದನ್ನು ಕಲಿಸುಕೊಂಡೆವು (ಮತ್ತಾಯ 16:21–23ನ್ನು ನೋಡಿ). ಪೇತ್ರನು ಉತ್ತರವು ತನ್ನ (ಆಗಿನ ತಪ್ಪು ಅಭಿಪ್ರಾಯಕ್ಕೆ) ಹೊಂದಿಕೊಳ್ಳುತ್ತದೆಯೇ? ಕ್ರಿಸ್ತನು ಈ ಲೋಕದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸುತ್ತಾನೆ ಎಂದು ಪೇತ್ರನು ಈ ದೃಷ್ಟಿಕೋನವು ಇಲ್ಲಿ ಸರಿಯಾಗಿ ಹೊಂದಿಕೊಳ್ಳುತ್ತದೆ).

1) ಇಲ್ಲಿ ಪೇತ್ರನು ಸಲಹೆಯನ್ನು ತೆಗೆದುಕೊಂಡನೇ? (ಮತ್ತಾಯ 16:17 ಹೇಳುತ್ತದೆ – ಅದಕ್ಕೆ ಯೇಸು, ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟನ್ನು ನಿನಗೆ ತಿಳಿಸಿದವನು ನರಮನುಷನಲ್ಲ ಪರಲೋಕದಲ್ಲಿರುವ ತನ್ನ ತಂದೆಯೇ ತಿಳಿಸಿದನು ಸಲಹೆಯನ್ನು ಪೇತ್ರನು ತೆಗೆದುಕೊಂಡನು.)

ಇ) ಮತ್ತಾಯ 16:18ನ್ನು ಓದಿಕೊಳ್ಳಿ.

ಈ ಬಂಡೆ ಯಾವುದು? [ಪೇತ್ರ ಎಂದರೆ ಗ್ರೀಕ್ ಭಾಷೆಯಲ್ಲಿ ಬಂಡೆ ಅಥವ ಕಲ್ಲು ಎಂದು ಅರ್ಥ. ಕ್ರಿಸ್ತನು ಹೇಳುತ್ತಾನೆ – ನೀನು ಬಂಡೆ (ಅಥವ ಕಲ್ಲು). ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು ಎಂದು]

1) ಇದನ್ನು ಗಮನಿಸುವಾಗ, ನಮಗನಿಸುತ್ತದೆ, ನಿಜವಾಗಿಯೂ ಯೇಸುವು ತನ್ನ ಸಭೆಯನ್ನು ಪೇತ್ರನ ಮೇಲೆ ಕಟ್ಟುತ್ತಾನೆಯೋ? ಯೇಸು ಹೀಗೆ ಮಾಡುತ್ತಾನೆ ಎಂದು ನೀವು ನೆನಸುತ್ತೀರೋ? (ಸ್ಟ್ರಾಂಗ್ಸ್ ಹೇಳುತ್ತಾರೆ ಗ್ರೀಕ್ ಭಾಷೆಯಲ್ಲಿ ಪೇತ್ರ ಅಂದರೆ "ಒಂದು ಬಂಡೆಯ ತುಂಡು" ಎಂದು ಆದರೆ ಈ ವಚನದಲ್ಲಿ ಬಂಡೆಗೆ ಗ್ರೀಕ್ ಭಾಷೆಯಲ್ಲಿ "ಒಂದು ಶೇಕಡಿಸಿರುವ ಬಂಡೆ" ಎಂದು ಅರ್ಥ ಕೊಡುತ್ತದೆ.)

2) 1 ಕೊರಿಂಥವರಿಗೆ 10:3–4 ವಚನವನ್ನು ಓದಿಕೊಳ್ಳಿ.

3) ಎಫೇಸದವರಿಗೆ 2:19–20 ವಚನವನ್ನು ಓದಿಕೊಳ್ಳಿ ಇಲ್ಲಿ ಯಾರು ಅಥವ ಯಾವುದು ಆ ಬಂಡೆ?

4) 1 ಪೇತ್ರ 2:7–8 ವಚನವನ್ನು ಓದಿಕೊಳ್ಳಿ ಇಲ್ಲಿ ಯಾರು ಅಥವ ಯಾವುದು ಆ ಬಂಡೆ?

ಈ) ಪ್ರೋಟೆಸ್ಟೆಂಟರು ವಾದಿಸುತ್ತಾರೆ: ಮತ್ತಾಯ 16:18ರಲ್ಲಿ ಬರೆದಿರುವ ಬಂಡೆ ಪೇತ್ರನಲ್ಲ ಎಂದು. ಕಳೆದ ವಾರ ಪೇತ್ರನ ಬಂಡೆಯಲ್ಲದ ಬಲಹೀನತೆಗಳನ್ನು ಮತ್ತು ಸೋಲುಗಳನ್ನು ಕಲಿತುಕೊಂಡಿದ್ದೇವೆ. ಆದಾಗ್ಯೂ ಈ ವಚನವು ಹೇಳುತ್ತದೆ. ಕ್ರಿಸ್ತನು ತನ್ನ ಸಭೆಯನ್ನು ಈ ಬಂಡೆಯ ಮೇಲೆ ಕಟ್ಟುತ್ತಾನೆ ಎಂದು ಹೀಗೆ ಹೇಳುವಾಗ ಇದು ಪೇತ್ರನನ್ನು ಕುರಿತು ಹೇಳುವುದಲ್ಲವೆ? (ನನಗನಿಸುತ್ತದೆ ಇಲ್ಲಿ ನಾವು ಒಂದು ಪ್ರಾಮುಖ್ಯವಾದ ಸಾರಂಶವನ್ನು ಕಳೆದುಕೊಂಡಿದ್ದೇವೆ. ಅದೇನೆಂದರೆ, ಕೆಥೋಲಿಕರು, ಪೇತ್ರನು ಒಂದು ಬಂಡೆಯು ಮತ್ತು "ಮೊದಲನೆಯ ಪೋಪನು" ಎಂದು ಹೇಳುವುದನ್ನು ತಿರಸ್ಕಾರ ಮಾಡುತ್ತೇವೆ. ಎಫೆಸದವರಿಗೆ 2:20 ರಲ್ಲಿ ತಿಳಿಸುತ್ತದೆ: ಅಪೊಸ್ತಲರು ಮತ್ತು ಪ್ರವಾದಿಗಳು "ಅಡಿಪಾಯಗಳು" ಮತ್ತು ಯೇಸು ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು ಎಂದು. ಇದನ್ನು ಹೀಗೆ ಅರ್ಥಮಾಡಿಕೊಳ್ಳಬೇಕು – ಕ್ರಿಸ್ತನೇ ಬಂಡೆ, ಅಪೊಸ್ತಲರು (ಪೇತ್ರನನ್ನು ಸೇರಿಸಿ) ಸಭೆಯ ಅಸ್ತಿವಾರದ ಬಂಡೆಗಳು ಎಂದು. ಪೇತ್ರನು, ಕ್ರಿಸ್ತನೇ ದೇವರು ಎಂದು ಅರಿಕೆ ಮಾಡಿಕೊಳ್ಳುವಾಗ ಅದೂ ಸಹ ಬಂಡೆಯೇ. ಯಾಕೆಂದರೆ ಧಾರ್ಮಿಕ ಜ್ಞಾನದಲ್ಲಿ ಇದು ಸಭೆಯ ಅಡಿಪಾಯವಾಗಿದೆ.

2) ನಿಮ್ಮ ಮನೆಯಲ್ಲಿ ಬಾಗಿಲಿದೆಯೇ? ಬಾಗಿಲು ನಿಮ್ಮನ್ನು ತಡೆಯುತ್ತದೆಯೇ? ಮತ್ತಾಯ 16:18ರಲ್ಲಿ ತಿಳಿಸುತ್ತದೆ ಪಾತಾಳ ಲೋಕದ ಬಾಗಿಲುಗಳು ಸಭೆಯನ್ನು ಸೋಲಿಸಲಾರದು ಎಂದು. (ಇಲಲಿ ಈ ವಾಕ್ಯದ ಅರ್ಥ ನನಗೆ ಇಷ್ಟೇ: ಬಾಗಿಲುಗಳು ತಡೆಯುವುದಿಲ್ಲ ಆದರೆ ರಕ್ಷಿಸುತ್ತವೆ. ಇದು ಸಭೆಯು ದುಷ್ಟತನವನ್ನು ಎದುರಿಸುವ ದೃಶ್ಯ. ದುಷ್ಟತನವು ನೀತಿವಂತಿಕೆಗೆ ವಿರೋಧವಾಗಿದೆ.)

ಇ) ಮತ್ತಾಯ 16:19ನೇ ವಚನವನ್ನು ಓದಿಕೊಳ್ಳಿ.

ಬಂಡೆಯ ಸ್ಥಾನ ಪಡೆಯುವುದರಿಂದ ನಿಮಗೇನು ಸಿಗುತ್ತದೆ? ಎಂಥಹ "ಬೀಗದ ಕೀಲಿ" ನಿಮಗೆ ದೊರಕುತ್ತದೆ? (ನಿಮಗೆ ಪರಲೋಕದ ಬೀಗದ ಕೀಲಿಗಳು ಸಿಗುತ್ತದೆ.)

1) ಹೀಗಂದರೆ ಏನು? (ನನಗೂ ಸಹ ಸರಿಯಾಗಿ ಅರ್ಥವಾಗುವುದಿಲ್ಲ ಇದರ ಅರ್ಥ. ಆದರೂ ಇದನ್ನು ಹೀಗೆ ಅರ್ಥ ಮಾಡಿಕೊಳ್ಳುತ್ತೇನೆ. ನನಗೆ ಒಂದು ಕಾರಿನ ಅಥವ ಮನೆಯ ಬೀಗದ ಕೀಲಿ ಸಿಕ್ಕಿದಾಗ ನಾನು ಅದನ್ನು ವಶಪಡಿಸಿಕೊಳ್ಳುತ್ತೇನೆ. ನಾನು ಅದರ ಒಳಗೆ ಹೋಗಿ ಅದನ್ನು ಉಪಯೋಗಿಸಬಹುದು. ಇತರರನ್ನು ಒಳಗೆ ಹೋಗಿ ಅದನ್ನು ಉಪಯೋಗಿಸಬಹುದು. ಇತರರನ್ನು ಒಳಗೆ ಸೇರಿಸಿಕೊಳ್ಳಬಹದು. ಅಥವ ಕೆಲವರನ್ನು ಹೊರಗೆ ನಿಲ್ಲಿಸಬಹುದು. ನನ್ನ ಅನಿಸಿಕೆ ಏನೆಂದರೆ, ಯಾರಾದರೂ ಕ್ರಿಸ್ತನ ಧೈವೀಕತ್ವವನ್ನು ಅಂಗೀಕಾರ ಮಾಡುವಾಗ ಪರಲೋಕಕ್ಕೆ ಹೋಗುವುದಕ್ಕೆ ಅವಕಾಶ ಸಿಗುತ್ತದೆ. ಆಗ ಅಪೋಸ್ತಲರಾಗಿದ್ದು, ಈಗ ಸಭೇಯ ನಾಮಕರಾಗಿದ್ದರೆ, ಅಂಥಹವರಿಗೆ ಇತರನ್ನು ಮತ್ತು ಜವಾಬ್ದಾರಿಕೆಯು ಕೋಡಲಾಗುತ್ತದೆ.

2) ಕ್ರಿಸ್ತನು ಹೇಳುತ್ತಾನೆ ಅಪೋಸ್ತಲರು (ಇಂದಿನ ಸಭೆಯ ನಾಯಕರು) "ಬಂಧಿಸಿ" ಮತ್ತು "ಸಡಿಲಗೊಳಿಸುತ್ತಾರೆ". ಎನ್ನುವಾಗ ಇದರ ಅರ್ಥವೇನು? (ಅ.ಕೃ.15:5–1 ನ್ನು ಓದಿಕೊಳ್ಳಿ. ಇಲ್ಲಿ ಪೇತ್ರನು ಹೇಳುತ್ತಾನೆ ಪರಿವರ್ತನೆಯಾದ ಅನ್ಯಜನರು ಮೋಶಯ ಆಜ್ಞೆಯನ್ನು ಕೈಗೊಳ್ಳಬೇಕಾಗಿಲ್ಲ ಎಂದು ಅ.ಕೃ.15:12–21ನೇ ವಚನವನ್ನು ಸಂಪೂರ್ಣವಾಗಿ ಓದಿಕೊಳ್ಳುವಾಗ ಇಲ್ಲಿ ಯಾಕೋಬನು ನ್ಯಾಯವಿಚಾರಣೆಯ ಬಗ್ಗೆ ತಿಳಿಸುತ್ತಾನೆ. ಅ.ಕೃ.15:20ನೇ ವಚನವು ಮಾತ್ರ ನಿರೂಪಿಸುವ ಆಜ್ಞಾವಿಧಿಗಳಿಗೆ ಬಂಧಿಸಲ್ಪಟ್ಟಿದೆ ಎಂದು ಪೇತ್ರನು ಮತ್ತು ಸಭೆಯು ದೇವರು ಮೋಶಗೆ ಕೊಟ್ಟಿರುವ ಆಜ್ಞಾವಿಧಿಗಳನ್ನು ಸಡಿಲಗೊಳಿಸಿತ್ತಿದ್ದಾರೆ.

3) ಈ ಒಂದು ಸನ್ನಿವೇಶದಲ್ಲಿ ಪೇತ್ರನಲ್ಲ ಯಾಕೊಬನು ತನ್ನ ಕೊನೆಯ ವಾಕ್ಯವನ್ನು ತಿಳಿಸುತ್ತಾನೆ. ಮತ್ತಾಯ 18:15–18ನ್ನು ಓದಿಕೊಳ್ಳಿ. ಇಲ್ಲಿ ಯೇಸುವು ಶಿಷ್ಯರ ಸಂಗಡ ಮಾತಾಡುತಿದ್ದಾನೆ. (ಗಮನ ಕೊಟ್ಟು ಕೇಳುವ ಗುಂಪಿಗೆ) ಬಂಧಿಸುವುದರ ಬಗ್ಗೆ ಮತ್ತು ಸಡಿಲಗೊಳಿಸುವುದರ ಬಗ್ಗೆ ಏನನ್ನು ಹೇಳುತ್ತದೆ.(ಇದು ಸಭೆಯ ಒಳಗೆ ನಡೆಯುವ ವಾಗ್ವಾದಗಳನ್ನು ಕುರಿತು ತಿಳಿಸುತ್ತದೆ.)

II. **ಬಂಡೆಯಾದ ಪೇತ್ರನು**

ಅ) ಅಪೋಸ್ತಲರ ಕೃತ್ಯಗಳು 2:1–4 ಮತ್ತು ಅ.ಕೃ. 2:4–16ನ್ನು ಓದಿಕೊಳ್ಳಿ. ಇದು ಕ್ರಿಸ್ತನ ಪುನರುತ್ಥಾನದ ಬಳಿಕ ಪಂಚಾಶತ್ತಮ ದಿನದ ಮೊದಲನೆ ದಿವನ್ನು ವಿವರಿಸುತ್ತದೆ. ಆದಿ ಸಭೆಗೆ ಪಂಚಾಶತ್ತಮ ದಿನದ ಪ್ರಾಮುಖ್ಯತೆ ಏನಾಗಿದೆ? (ಇಲ್ಲಿ ತಾನೆ ಯೆಹೂದ್ಯರು (ಅ.ಕೃ.2:5) : ಆಕಾಶ ಕೆಳಗಿರುವ ಎಲ್ಲಾ ದೇಶಗಳಿಂದ" ಬಂದು ಪವಿತ್ರಾತ್ಮನ ಶಕ್ತಿಯನ್ನು ನೋಡಿ ಕ್ರಿಸ್ತನೇ ಮೆಸ್ಸೀಯನು ಎಂದು ಆಲಿಸಿದರು.

1. ಈ ಸನ್ನಿವೇಶದ ನಾಯಕನು ಯಾರು? (ಪೇತ್ರ!)

ಆ) ಅ.ಕೃ. 10:9–13 ಮತ್ತು ಅ.ಕೃ. 10:16–18ನ್ನು ಓದಿಕೊಳ್ಳಿ.

ಪೇತ್ರನು ಕಂಡ ದರ್ಶನದ ಅರ್ಥವೇನು? (ಈ ಕಥೆ ನಿಮಗೆ ಗೊತ್ತಿಲ್ಲದಿದ್ದರೆ, ಅ.ಕೃ. 10ನೇ ಅಧ್ಯಾಯವನ್ನು ಸಂಪೂರ್ಣವಾಗಿ ಓದಿಕೊಳ್ಳಿ. ಕಥೆಯ ಅರ್ಥ. ಏನೆಂದರೆ ಪೇತ್ರನು ಅನ್ಯರನ್ನು "ಅಶುದ್ಧ" ಎಂದು ಕರೆಯಬಾರದು ಮತ್ತು ಅವರಿಗೆ ಸುವಾರ್ತೆಯನ್ನು ಸಾರುವುದನ್ನು ತಡೆಯಬಾರದು. ನಿಶ್ಚಯವಾಗಿ ಕೊರ್ನೆಲ್ಯನಿಗೂ ಮತ್ತು ಆತನ ಸಹಪಾಠಿಗಳಿಗೂ ಅನ್ವಯಿಸುತ್ತದೆ.

1. ಈ ಒಂದು ಸನ್ನಿವೇಶ ಪೇತ್ರನ ಜೀವನ ಚರಿತ್ರೆಗೆ ಏನನ್ನು ಸೇರಿಸುತ್ತದೆ? (ಯೆಹೂದ್ಯರಿಗೆ ಆ ಪಂಚಾಶತ್ತಮ ದಿನದಲ್ಲಿ ಪ್ರಸಂಗ ಮಾಡಿದವರಲ್ಲಿ ಪೇತ್ರನು ಮೊದಲಿಗನು ಸಂಖ್ಯಾಕ್ರಮದಲ್ಲಿ ಅ.ಕೃ.ಗಳನ್ನು ಬರೆದಿದ್ದರೆ, ಸುವಾರ್ತೆಯನ್ನು ಅನ್ಯರಿಗೆ ಸಾರುವುದರಲ್ಲಿ ಪೇತ್ರನು ನಾಯಕನಾಗುತ್ತಾನೆ. ಅ.ಕೃ. 15:7ರಲ್ಲಿ ಪೇತ್ರನೇ ಸ್ವತಃ ಖಚಿತಪಡಿಸುತ್ತಾನೆ. ಅನ್ಯರು ನನ್ನ ತುಟಿಗಳಿಂದ ಸುವಾರ್ತೆಯನ್ನು ಕೇಳಿದರು ಎಂದು.)

ಇ) ಅ.ಕೃ. 2:42–43ನ್ನು ಓದಿಕೊಳ್ಳಿ.

ಇಲ್ಲಿ ಅಪೊಸ್ತಲರಲ್ಲಿ ಯಾವ ನೂತನ ಚಟುವಟಿಕೆಯನ್ನು ಕಂಡುಕೊಳ್ಳುತ್ತೇವೆ? (ಅವರು ಅನೇಕ ಅದ್ಭುತಗಳನ್ನು ಸೂಚಕಕಾರ್ಯಗಳನ್ನು ಮಾಡಿದರು.)

1. ಯಾಕೆ ಇಂತಹ ಒಂದು ಶಕ್ತಿಯು ಕೇವಲ ಅಪೊಸ್ತಲರಲ್ಲಿ ಮಾತ್ರ ಇದೆ. ಇತರ ಸಭಿಕರಲ್ಲಿ ಇಲ್ಲ? ಇದು ಒಂದು ವೇಳೆ "ಬಂಧಿಸುವುದರ ಮತ್ತು ಸಡಿಲಿಸುವುದರ" ಅಧಿಕಾರವನ್ನು ಸೂಚಿಸುತ್ತದೆಯೇ.

ಈ) ಅ.ಕೃ. 3:1–5ನ್ನು ಓದಿಕೊಳ್ಳಿ.

ಇಂತಹ ಒಬ್ಬ ಬಿಕ್ಷುಕನು ನೀವಾಗಿದ್ದರೆ, ಏನನ್ನು ಅಪೇಕ್ಷಿಸುತ್ತಿದ್ದೀರಿ?

ಉ) ಅ.ಕೃ. 3:6–8ನ್ನು ಓದಿಕೊಳ್ಳಿ.

ಈಗ ಪೇತ್ರನ ಜೀವನ ಚರಿತ್ರೆಗೆ ಏನನ್ನು ಸೇರಿಸುತ್ತೀರಿ? (ಅ.ಕೃ.2.43 ರಲ್ಲಿ ತಿಳಿಸುತ್ತದೆ. ಅನೇಕ ಅದ್ಭುತ ಕಾರ್ಯಗಳು ಅಪೊಸ್ತಲರಿಂದ ನಡೆದವು ಆದರೆ ಪೇತ್ರನು ದಾಖಲಿಸಿರುವ ಮೊದಲ ಅದ್ಭುತವನ್ನು ಮಾಡಿದನು.)

1. ಮತ್ತೊಮ್ಮೆ ಅ.ಕೃ. 3:6ನ್ನು ನೋಡಿಕೊಳ್ಳಿ.
ಪೇತ್ರನು ತನಗೆ ಕೊಟ್ಟಿರುವ ಅಧಿಕಾರದಿಂದ ಈ ಅದ್ಭುತಗಳನ್ನು ಮಾಡಿದನೋ? (ಇಲ್ಲ, ಪೇತ್ರನು ಇದನ್ನು ಯೇಸು ಕ್ರಿಸ್ತನ ಹೆಸರು ಮತ್ತು ಶಕ್ತಿಯಿಂದ ಮಾಡಿದನು.)

ಅ) ನಿಜವಾಗಿಯೂ ಪೇತ್ರನಲ್ಲಿ ಏನಿದೆ? (ವಚನ 6 – "ಬೆಳ್ಳಿ ಬಂಗಾರವಂತೂ ನನ್ನಲಿಲ್ಲ, ನನ್ನಲ್ಲಿರುವುದನ್ನು ನಿನಗೆ ಕೊಡುತ್ತೇನೆ.") ಇದನ್ನು ತಾನೆ ಹುಟ್ಟು ಕುಂಚನಾಗಿದ್ದ ಬಿಕ್ಷುಕನಿಗೆ ಕೊಟ್ಟನು?

ಆ) ಪೇತ್ರನು "ಬಂಧಿಸುವುದರ ಮತ್ತು ಸಡಿಲಿಸುವುದರ" ಶಕ್ತಿಯನ್ನು ಹಂಚಿಕೊಳ್ಳುತ್ತಿದ್ದಾನೆಯೇ? (ಮಾರ್ಕ 16:15–18ನ್ನು ಓದಿಕೊಳ್ಳಿ.) ನಾವು ಸುಲಭವಾಗಿ ಹೇಳಬಹುದು ಪೇತ್ರನಿಗೂ (ಉಳಿದ ಅಪೊಸ್ತಲರಿಗೂ ಇತರ ವಿಶ್ವಾಸಿಗಳಲ್ಲಿ ಇಲ್ಲದ ಮಹಾನ್ ಶಕ್ತಿ ಇತ್ತು ಎಂದು. ಆದರೆ ಇದೇ ಮಾರ್ಕ 16:17–18ರಲ್ಲಿ ಸತಃ ಕ್ರಿಸ್ತನ ಮಾತುಗಳೇ ತೋರಿಸುತ್ತದೆ. ನಂಬುವ ಎಲ್ಲಾ ವಿಶ್ವಾಸಿಗಳಿಗೂ ಶಕ್ತಿಯು ದೊರಕುತ್ತದೆ ಎಂದು ಪೇತ್ರನು ಈ ಬಿಕ್ಷುಕನ ಜೊತೆಯಲ್ಲಿ ತನ್ನ ನಂಬಿಕೆಯನ್ನು ಮತ್ತು ದೇವರ ಶಕ್ತಿಯನ್ನು ಹಂಚಿಕೊಳ್ಳುತ್ತಿದ್ದಾನೆ.)

ಊ) ಅ.ಕೃ. 5:15ನ್ನು ಓದಿಕೊಳ್ಳಿ.ಇದು ಕಾರ್ಯ ಸಿದ್ಧಿಗೆ ಬಂತೆ?
ಅ.ಕೃ 19:11–12ನ್ನು ಓದಿಕೊಳ್ಳಿ ಇದು ಕಾರ್ಯರೂಪಕ್ಕೆ ಬಂತೆ?
(ಮೊದಲನೆ ವಚನ ಕಾರ್ಯಸಿದ್ಧಿಗೆ ಬಂತು ಎಂದು ಹೇಳುವುದಿಲ್ಲ. ಆದರೆ, ಎರಡನೇ ವಚನ ತಿಳಿಸುತ್ತದೆ. ಇದು ಕಾರ್ಯರೂಪಕ್ಕೆ ಬಂತು ಎಂದು. ನನ್ನ ಊಹೆ ಏನಂದರೆ, ಪೌಲನು ಕೈವಸ್ತ್ರವನ್ನು ಮುಟ್ಟುವಾಗ ಗುಣ ಹೊಂದಿದರೆ, ಪೇತ್ರನು ನೆರಳೂ ಸಹ ಗುಣಪಡಿಸಿತು.)

ಎ) ಇವೆಲ್ಲಾ ಗುಣಗಳನ್ನು ಪೇತ್ರನಲ್ಲಿ ಕಂಡುಕೊಳ್ಳುವಾಗ ಪೇತ್ರನನ್ನು "ಬಂಡೆ" ಎಂದು ಕರೆಯುವುದು ಸರಿಯೇ? ಅಂದ ಮೇಲೆ "ಮೊದಲನೇ ಪೋಪನ" ಬಗ್ಗೆ ಏನನಿಸುತ್ತದೆ?

## III. ಅಸ್ಥಿರನಾದ ಪೇತ್ರ.

ಅ) ಗಲಾತ್ಯದವರಿಗೆ 2:8–10ನ್ನು ಓದಿಕೊಳ್ಳಿ.
ಆದಿ ಸಭೆಯ ಸ್ಥಾಪನೆಯಲ್ಲಿ ಪೇತ್ರನು ತನ್ನನ್ನು ಹೇಗೆ ತೊಡಗಿಸಿಕೊಂಡನು? (ಅವರು ಕೆಲಸವನ್ನು ತಮ್ಮತಮ್ಮೊಳಗೆ ಹಂಚಿಕೊಂಡರು.)

ಆ) ಗಲಾತ್ಯದವರಿಗೆ 2:11–18ನ್ನು ಓದಿಕೊಳ್ಳಿ.
ಯಾಕೆ ಪೇತ್ರನು ತನ್ನ ಅಭ್ಯಾಸವನ್ನು ಬದಲಾಯಿಸಿಕೊಂಡನು?

1. ಅಶುದ್ಧವಾದ ಪ್ರಾಣಿಗಳ ವಿಷಯದಲ್ಲಿ ದರ್ಶನಪಡೆದಿರುವ ಮನುಷ್ಯನು ಹೇಗೆ ತಾನೆ ಹೀಗೆ ಮಾಡಲು ಸಾಧ್ಯ? ಯಾಕೆ ಹೀಗೆ ಮಾಡುತ್ತಾನೆ?

ಇ) ಗಲಾತ್ಯದವರಿಗೆ 2:14–16ನ್ನು ಓದಿಕೊಳ್ಳಿ.

ತಿನ್ನುವುದು ಹೇಗೆ ''ಸುವಾರ್ತೆಯ ಸತ್ಯಕ್ಕೆ'' ಸಂಬಂಧವಾಗಿದೆ? (ಸುವಾರ್ತೆಯ ಸತ್ಯಾಂಶವೇನೆಂದರೇ, ಸುವಾರ್ತೆಯು ಎಲ್ಲಾ ಜನರಿಗೂ ಕೊಡಲ್ಪಟ್ಟಿದೆ. ನಾನು ನಂಬುತ್ತೇನೆ. ಪೇತ್ರನು ಯಾಕೋಬನಿಂದ ಕಳುಹಿಸಲ್ಪಟ್ಟ ಯೆಹೂದ್ಯ ಕ್ರೈಸ್ತರ ಜೊತೆ ವಿವಾದವನ್ನು ತಡೆಯಲು ಹೀಗೆ ಮಾಡಿದನು. ಎಂದು)

1. ಈ ಒಂದು ಪಾಠ ಬಂಡೆಯಾದ ಪೇತ್ರನ ಬಗ್ಗೆ ಏನನ್ನು ಕಲಿಸುತ್ತದೆ?
(ಸಭೆಯ ನಾಯಕರುಗಳು ತಪ್ಪು ಮಾಡಬಹುದು? ಸುವಾರ್ತೆಗೋಸ್ಕರ ಹೊಸ ಸ್ಥಳಗಳನ್ನು ತೆರೆದು ದೇವರಿಂದ ಆಶೀರ್ವಾದಿಸಲ್ಪಟ್ಟವರೂ ಸಹ ತಪ್ಪು ಮಾಡಬಹುದು.

ಈ) ಸ್ನೇಹಿತನೇ, ನೀನು ಕ್ರೈಸ್ತೀಯ ಜೀವನದಲ್ಲಿ ಅನೇಕ ತಪ್ಪುಗಳನ್ನು ಮಾಡಿದ್ದೀಯೇ? ನಿನಗೆ ಅರಿವಾಗುತ್ತದೋ, ನೀನು ಪರಿಪಕ್ವವುಳ್ಳ ಕ್ರೈಸ್ತನಾದಾಗ್ಯೂ ತಪ್ಪು ನಡೆಯುತ್ತದೆ ಎಂದು? ಪೇತ್ರನ ಕಥೆಯು ಕರ್ತನನ್ನು ಹಿಂಬಾಲಿಸುವ ಪಾಪಿಗೂ ಉತ್ತೇಜನವನ್ನು ಪ್ರೋತ್ಸಾಹವನ್ನು ನೀಡುತ್ತದೆ. ಪೇತ್ರನ ಅದ್ಭುತವಾದ ಕೆಲಸ ದೇವರಿಗಾಗಿ ಉತ್ತಮವಾದ ಕೆಲಸವನ್ನು ಮಾಡಬೇಕು ಅನಿಸುವ ಪ್ರತಿಯೊಬ್ಬರಿಗೂ ಮಾದರಿಯಾಗಿದೆ.

**IV. ಮುಂದಿನ ವಾರ : ಸೇವೆಯ ಮನಸ್ಸುಳ್ಳ ಸ್ತ್ರೀಯರು.**